International Journal of Kannada Research 2021; 7(3): 129-131

International Journal of Kannada Research
www.kannadajournal.com

ISSN: 2454–5813
IJKR 2021; 7(3): 129-131
© 2021 IJKR
www.kannadajournal.com
Received: 14-05-2021
Accepted: 18-06-2021

**ಡಾ.ಕವಿತ.ಬಿ.ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ.ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಕರ್ನಾಟಕ, ಭಾರತ

**Corresponding Author:**
**ಡಾ.ಕವಿತ.ಬಿ.ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ.ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಕರ್ನಾಟಕ, ಭಾರತ

# ಎಂ.ಎಸ್.ಕೆ ಪ್ರಭುರವರ 'ಮುಖಾಬಿಲೆ'

**ಡಾ.ಕವಿತ.ಬಿ.ಎನ್**

**DOI:** https://doi.org/10.22271/24545813.2021.v7.i3b.928

**ಪೀಠಿಕೆ**

ಕನ್ನಡ ಸಾಹಿತ್ಯ ಅನೇಕ ಮೇರು ಪ್ರತಿಭೆಗಳನ್ನು ತನ್ನ ಸಾಹಿತ್ಯ ಗರ್ಭದಲ್ಲಿರಿಸಿಕೊಂಡಿದೆ.ಕನ್ನಡ ಭಾಷೆ,ಸಾಹಿತ್ಯ,ವಿಮರ್ಶೆ ಎಲ್ಲವೂ ಸೈದ್ಧಾಂತಿಕ,ತಾತ್ವಿಕ ನೆಲೆಯಲ್ಲಿ ಚಿಂತನೆಗಳಿಗೆ ಎಡೆಮಾಡಿಕೊಟ್ಟಿದೆ.ಇತರ ಭಾಷೆಯ ಸಾಹಿತ್ಯಾಸಕ್ತರನ್ನು ನಿಬ್ಬೆರಗಾಗಿಸುವ ಜಾಯಮಾನ ಕನ್ನಡ ಸಾಹಿತ್ಯದ್ದು.ಇಂತಹ ಕನ್ನಡ ಸಾಹಿತ್ಯದಲ್ಲಿ ರಚನಾತ್ಮಕವಾಗಿ ಕಾರ್ಯೋನ್ಮುಖರಾಗಿದ್ದ ಸಾಹಿತಿಗಳು ಅವರ ಬರವಣಿಗೆಯಲ್ಲಿ ಭಿನ್ನ ವಿಚಾರಗಳು, ವಸ್ತು ಆಯ್ಕೆ, ಶೈಲಿ, ಆಯಾಮಗಳ ಅಭಿವ್ಯಕ್ತಿಸುವ ಮೂಲಕ ಇತರ ಭಾಷಿಗರನ್ನು ಆಕರ್ಷಿಸುವಂಥವರು. ಇಂಥ ಹಲವು ಸಾಹಿತಿಗಳನ್ನು ಕನ್ನಡ ಸಾಹಿತ್ಯ ಒಳಗೊಂಡಿದ್ದು, ಅವರಲ್ಲಿ ಎಂ.ಎಸ್.ಕೆ ಪ್ರಭುರವರು ಒಬ್ಬರು. ಫ್ಯಾಂಟಸಿಯಂಥ ಕಾಲ್ಪನಿಕ ಜಗತ್ತಿನ ಕಥನ ಕ್ರಮದ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಹುಬ್ಬೇರಿಸುವಂತೆ ಮಾಡಿರುವ ಅವರ ಬರಹಗಳ ವಸ್ತು ವೈವಿಧ್ಯತೆ,ವಿಚಾರಧಾರೆಗಳ ವಿಸ್ತೃತವಾದ ಅಧ್ಯಯನವಾಗಬೇಕಾಗಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ, ಲೇಖಕರ ಬಳಗದಲ್ಲಿ ?ಫ್ಯಾಂಟಸಿ ಪ್ರಭು'ಯೆಂದೇ ಪ್ರಖ್ಯಾತರಾದ ಲೇಖಕರು ಎಂ.ಎಸ್.ಕೆ ಪ್ರಭುರವರು.ಅವರ ವಿಭಿನ್ನ ಸಾಹಿತ್ಯ ಶೈಲಿ ಸಾಹಿತ್ಯಾಸಕ್ತರನ್ನು ಬೇರೊಂದು ಕಾಲ್ಪನಿಕ ಜಗತ್ತಿಗೆ ಕೊಂಡೊಯ್ಯುತ್ತಲೇ ವಾಸ್ತವತೆಯನ್ನು ಚರ್ಚಿಸುತ್ತಾ, ಮಾನವತಾವಾದವನ್ನು ಪ್ರತಿಪಾದಿಸುವಂಥದ್ದು.ಈ ಮೂಲಕ ಕಾಲ್ಪನಿಕ ವಸ್ತು ವಿಚಾರ ಪ್ರಪಂಚಕ್ಕೆ ತೆರೆದುಕೊಂಡವರು.ಹಾಗಾಗಿ ಫ್ಯಾಂಟಸ್ಟಿಕ್ಸಾಹಿತ್ಯ ಸಂರಚನೆಯ ಅದ್ಭುತ ಲೋಕವನ್ನು ಸಾಹಿತ್ಯಾಸಕ್ತರಲ್ಲಿ ಸೃಷ್ಟಿಸಿದ ಮಹೋನ್ನತ ಪ್ರತಿಭೆ ಎಂ.ಎಸ್.ಕೆ ಪ್ರಭುರವರು.

ಎಂ.ಎಸ್.ಕೆ ಪ್ರಭುರವರ ಕಥನ ವಸ್ತುವೇ ವಿಭಿನ್ನ ಹಾಗೂ ವಿಶಿಷ್ಟ. 1900ರ ಕಾಲಘಟ್ಟದಲ್ಲಿ ಬಹುತೇಕ ಸಾಹಿತ್ಯಕಾರರೆಲ್ಲಾ ವಾಸ್ತವವಾದಿ ನೆಲೆಯಲ್ಲಿ ಸಾಹಿತ್ಯ ರಚಿಸುತ್ತಿದ್ದರೆ ಪ್ರಭುರವರು ಮಾತ್ರ ಇದಕ್ಕೆ ಪ್ರತಿರೋಧವಾಗಿ ಕಾಲ್ಪನಿಕ, ಅತೀಂದ್ರಿಯ ಹಾಗೂ ಅಲೌಕಿಕ ಘಟನೆಗಳಂಥ ವಸ್ತು ವಿಚಾರಗಳನ್ನು ಆಯ್ದು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದವರು. ವಾಸ್ತವವಾದಿ ಮಾರ್ಗವು ಜೀವನದ ಹಾಗೂ ಸೃಷ್ಟಿಯ ಸೂಕ್ಷ್ಮಾತಿಸೂಕ್ಷ್ಮಗಳನ್ನು ಗ್ರಹಿಸಲಾಗದೆಂಬ ಧೋರಣೆ ಹೊಂದಿದ್ದ ಫ್ಯಾಂಟಸ್ಟಿಕ್ ಅಥವಾ ಅದ್ಭುತ ರಮ್ಯ ಎಂಬ ಪರಿಕಲ್ಪನೆಯನ್ನು ಆಧರಿಸಿ ಕೃತಿಗಳನ್ನು ರಚಿಸಿದವರು. ರೂಢಿಗತವಾದ ವಾಸ್ತವವಾದಕ್ಕೆ ಸವಾಲೊಡ್ಡಿ, ಮಾನವಕೇಂದ್ರಿತವಾದ ಸಮಸ್ಯೆಗಳನ್ನು, ಪ್ರಕೃತಿಪರವಾದವನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ವೈಜ್ಞಾನಿಕ ನೆಲೆಯಲ್ಲಿ ಚಿಂತಿಸಿದವರು.ಆ ಚಿಂತನೆಗಳ ಮೂಲಕ ಓದುಗರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದವರು.ಈ ಹಿನ್ನೆಲೆಯಲ್ಲಿ ಅವರ ಸಮಗ್ರ ಸಾಹಿತ್ಯದ ಅಧ್ಯಯನ ಅತ್ಯಗತ್ಯವೆನಿಸುತ್ತದೆ.ಹೀಗಾಗಿ ಅವರ ಒಂದು ಕಥೆಯನ್ನು ಈ ಲೇಖನದ ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ.

ಯುದ್ಧೋತ್ತರ ಕಾಲದಲ್ಲಿ ಫ್ರಾನ್ಸಿನಲ್ಲಿ ಪ್ರಬಲವಾಗತೊಡಗಿದ್ದ ಅಸ್ತಿತ್ವವಾದದ ಪ್ರಭಾವಕ್ಕೆ ಒಳಗಾದ ಫ್ರೆಂಚ್ಲೇಖಕರಾದ ಸಾರ್ತ್ರ, ಕಾಮು ಮನುಷ್ಯನು ಜೀವನದ ಅರ್ಥ ಮತ್ತು ಉದ್ದೇಶವನ್ನು ಶೋಧಿಸುವ ಅಸಂಗತ ಸ್ಥಿತಿಯನ್ನು ವಿಶಿಷ್ಟ ತಂತ್ರದ ಮೂಲಕ ರೂಪಿಸಿದ ಅಸಂಗತ ಸಾಹಿತ್ಯ, ನಂತರ ಯೂರೋಪಿನ ಇತರ ದೇಶಗಳಿಗೂ ಹರಡಿದಂತೆ ಭಾರತವನ್ನೂ ಪ್ರವೇಶಿಸಿತು.

ಜೀವನದ ಮೂಲಭೂತ ನಿಶ್ಚಿತತೆಗಳು ಮಾಯವಾಗಿದ್ದ ದುರಂತಮಯ ದರ್ಶನವನ್ನೇ ಅಸಂಗತ ಸಾಹಿತ್ಯ ಚಿತ್ರಿಸುವುದು. ಜೀವನದ ಮೂಲಭೂತ ಮೌಲ್ಯಗಳನ್ನು ಕಳೆದುಕೊಂಡು ಅಥವಾ ಮರೆತು

ಕೇವಲ ಅದರ ಮರ್ತ್ಯತನವನ್ನು ಮತ್ತು ಯಾಂತ್ರಿಕತೆಯನ್ನು ಅನುಭವಿಸುವ ಮತ್ತು ಅದರ ಮೂಲಕ ಜಿಗುಪ್ಸೆ ಪಡುವ ಪ್ರಕ್ರಿಯೆ ಮನುಷ್ಯ ಕನ್ನಡಿ ಕೋಣೆಯಂತಿರುವ ಭ್ರಮಾಲೋಕದಲ್ಲಿ ಸಿಲುಕಿಕೊಂಡು ಪರಿತಪಿಸುವಂತೆ ಜೀವನ, ಮೃತ್ಯು, ಏಕಾಕಿತನ, ಸಂವಹನ ಮುಂತಾದ ಮೂಲಭೂತ ಸಮಸ್ಯೆಗಳನ್ನು ಚಿತ್ರಿಸುವ ಅಸಂಗತ ಸಾಹಿತ್ಯ ಮೇಲುನೋಟಕ್ಕೆ ಅಸಂಬದ್ಧ ಮತ್ತು ಹುಡುಗಾಟಿಕೆಯಂತೆ ಕಂಡರೂ ಮನುಷ್ಯನು ನಿಗೂಢ ಮತ್ತು ಗಂಡಾಂತರದ ವಿಶ್ವದಲ್ಲಿ ಸಿಲುಕಿಕೊಂಡು ಪರಿತಪಿಸುವ ಚಿತ್ರವಿದೆ.

ವ್ಯಕ್ತಿಯು ತನ್ನ ಅಂತರಾಳಕ್ಕಿಳಿದಾಗ ಅನುಭವಿಸುವ ಕನಸುಗಳು, ಫ್ಯಾಂಟಸಿಗಳು ಮತ್ತು ಭಯಗಳು ಚಿತ್ರಿಸಲ್ಪಡುತ್ತವೆ. ಹೀಗಾಗಿ ಅಸಂಗತ ಸಾಹಿತ್ಯದಲ್ಲಿ ಜೀವನ ದರ್ಶನವು ಹೆಚ್ಚು ಹೆಚ್ಚು ಖಾಸಗಿಯಾಗಿರುತ್ತದೆ. ಸುತ್ತಲಿನ ಸಮಾಜದೊಂದಿಗೆ ಹೊಂದಿಕೊಳ್ಳದೆ ಈ ದರ್ಶನದ ಖಾಸಗಿತನವೇ ವಸ್ತುವಾಗಿ ಇಲ್ಲಿ ವ್ಯಕ್ತವಾಗುತ್ತದೆ. ಅಂಥ ಅಸಂಗತ ಸಾಹಿತ್ಯ ಶೈಲಿ ಹಾಗೂ ಅದ್ಭುತ ರಮ್ಯವನ್ನು ಬಳಸಿಕೊಂಡು ರಚಿತವಾಗಿರುವ ?ಮುಖಾಬಿಲೆ' ಕಥೆಯೇ ಇಲ್ಲಿ ವಸ್ತುವಿಚಾರ.

ಶಾಲೆಯಲ್ಲಿ ಅಣಕು ಕಲಾವಿದನ ಅಣಕು ಪ್ರದರ್ಶನದಿಂದ ಪ್ರಾರಂಭವಾಗುವ ?ಮುಖಾಬಿಲೆ' ಕಥೆಯು ಫ್ಯಾಂಟಸಿಯೊಂದಿಗೆ ಅಸಂಗತತೆಯನ್ನು ಪ್ರದರ್ಶಿಸುತ್ತಾ ಸಾಗುತ್ತದೆ."ಯಾವುದೇ ವ್ಯಕ್ತಿಯ ಮುಖವನ್ನು ನೋಡಿ ನನ್ನ ಮುಖದ ಮಾಂಸಖಂಡಗಳಿಗೆ ಆ ರೂಪ ಕೊಡುತ್ತೇನೆ. ನನ್ನ ಕೈಬೆರಳಗಳಿಂದ ಮಣ್ಣಿನ ಬೊಂಬೆ ತಯಾರಿಸುವ ಕಲಾವಿದನಂತೆ ಮುಖದ ಮಾಂಸಖಂಡಗಳನ್ನು ತೀಡಿ,ತಿದ್ದಿ, ಅಮುಕಿ, ಉಬ್ಬಿಸಿ, ಕುಗ್ಗಿಸಿ, ಹೀಜಿ ಬೇಕಾದ ಆಕಾರವನ್ನು ತಳೆಯುತ್ತೇನೆ. ಬಹುಶಃ ಬೇರೆಯವರಲ್ಲಿ ಕಾಣಸಿಗದ ಒಂದು ಶಕ್ತಿ.... ಶಿವರಾಮ್ಕೇವಲ ನಾಲ್ಕಾರು ಮಾಂಸಖಂಡಗಳನ್ನು ಶೃತಿ ಮಾಡಿಕೊಂಡು ಚಹರೆಯನ್ನೇ ಬದಲಾಯಿಸಿಬಿಡುತ್ತಿದ್ದನಲ್ಲ!".ಅಣಕು ಕಲಾವಿದನಾಗಿ ಅಣಕು ಪ್ರದರ್ಶನವನ್ನು ನೀಡುವುದು ಕಲೆಯ ಅಭಿವ್ಯಕ್ತದ ವಾಸ್ತವತೆಯಾದರೆ ಇಲ್ಲಿ ಅಣಕು ಪ್ರದರ್ಶನಕ್ಕೆ ಪೂರಕವಾದ ಆಂಗಿಕ ಅಭಿನಯವನ್ನು ಮೀರಿದ ಫ್ಯಾಂಟಸಿ ಕಂಡುಬರುವುದೊಂದು ವಿಶೇಷ."ಒಂದೊಂದು ಮುಖವನ್ನು ನೋಡುವಾಗ ಅವನು ತನ್ನೊಳಗೇ ಅದೃಶ್ಯವಾಗಿ ಪ್ರವಿಸಿಕೊಳ್ಳುವ ಹಾರ್ಮೋನನ್ನು ಮುಖದ ಮಾಂಸಖಂಡಗಳ ಮೇಲೆ ಸಿಂಪಡಿಸಿ ಇಚ್ಛಾರೂಪಿಯಾಗುವಂತೆ ಉಪಯೋಗಿಸಿಕೊಳ್ಳುತ್ತಿದ್ದನೆಂದು ಸುಬ್ಬರಾಯನಿಗೆ ಖಾತರಿಯಾಗುತ್ತಿತ್ತು. ಈ ಹಾರ್ಮೋನು ತನ್ನಲ್ಲೂ ಇರಬಹುದೇ ಎಂಬ ಭಳಕು ಕುತೂಹಲ ಹುಟ್ಟಿ ಕಾಡಲಾರಂಭಿಸಿತು."

ಕಾರ್ಲ್ಯೂಂಗ್ ಕಲೆಯ ಸ್ವರೂಪ ಹಾಗೂ ಕಲಾಭಿವ್ಯಕ್ತಿಯ ರೀತಿ ಕುರಿತಂತೆ "ಪರಸ್ಪರ ವಿರುದ್ಧ ಹಾಗೂ ದ್ವಂದ್ವಾತ್ಮಕ ಮನಃಪ್ರವೃತ್ತಿಗಳನ್ನು ಒಂದಾಗಿ ಬೆಸೆಯುವ,ಅವುಗಳ ನಡುವೆ ಇರುವ ವ್ಯತ್ಯಾಸವನ್ನು ಇಲ್ಲವಾಗಿಸುವ ಚೈತನ್ಯಪೂರ್ಣ ಕ್ರಿಯೆಯ ಫಲ.ಸದಾ ಸೃಜನಶೀಲವಾದ ಇಂತಹ ಚೈತನ್ಯಪೂರ್ಣ ಕ್ರಿಯೆ ಫ್ಯಾಂಟಸಿ" ಎಂದು ಕರೆಯುತ್ತಾನೆ. ಇಂಥ ಫ್ಯಾಂಟಸಿ ಕಥಾ ಪಯಣದುದ್ದಕ್ಕೂ ಸಾಗುತ್ತಲೇ ಹೋಗುತ್ತದೆ.

ಜೀವನ ಸತ್ಯದ ನಿರೂಪಣೆಗೆ ಫ್ಯಾಂಟಸಿ ರೂಪವನ್ನು ಬಳಸಿಕೊಳ್ಳುತ್ತಲೇ ವಾಸ್ತವದ ಅರಿವು ಮನುಷ್ಯನಿಗಿರಬೇಕಾದ ಅಗತ್ಯತೆಯಯನ್ನು ಕಥೆ ವ್ಯಕ್ತಪಡಿಸುತ್ತದೆ. ಅಂತಿಮದ ದುರಂತತೆಯು ಮನುಷ್ಯ ತನ್ನನ್ನು, ತನ್ನ ತನವನ್ನು ಗೌರವಿಸುವ, ಪ್ರೀತಿಸುವ ನೆಲೆಯ ಪ್ರಾಮುಖ್ಯತೆಯ ಅರಿವಿನಾಳಕ್ಕೆ ಕೊಂಡೊಯ್ಯುತ್ತದೆ.

ಶಾಲಾದಿನದಲ್ಲಿ ಅಣಕು ಕಲಾವಿದನಾದ ಶಿವರಾಮ್ನಿಂದ ಪ್ರಭಾವಿತನಾಗುವ ಕಥಾನಾಯಕ ಸುಬ್ಬರಾಮ ಅವನ ಕಲೆಯನ್ನು ತಾನು ಕರಗತ ಮಾಡಿಕೊಳ್ಳುವ,ಇತರರನ್ನು ಅನುಕರಿಸುವ ಭರಾಟೆಯಲ್ಲಿ ತನ್ನನ್ನೇ ಮರೆಯುವ, ಮರೆಮಾಚಿಕೊಂಡು ಬದುಕುವ ಪರಿಸ್ಥಿತಿ ದುರಂತದೆಡೆಗೆ ಮನುಷ್ಯನನ್ನು ದೂಡಬಹುದಾದ ಬಗೆಗೆ ಎಚ್ಚರಿಕೆಯ ಪ್ರಜ್ಞಾಸ್ಥಿತಿ ಮನುಷ್ಯನಲ್ಲಿರಬೇಕೆಂಬ ಸಂದೇಶವನ್ನು ಸಾರುತ್ತದೆ.

"ಎಚ್ಚೆಮ್ಮನ್ನು ಸುಮಾರು ಎರಡು ವರ್ಷಗಳಿಂದಲೂ ನೋಡುತ್ತಿದ್ದರೂ ಏಕಾಏಕಿ ಅವರ ಮುಖದ ಸ್ವರೂಪವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲವಲ್ಲ.ಅಂದರೇನು ಅರ್ಥ?ತಾನು ಅವರನ್ನು ನೋಡಿದ್ದೇನೆ. ಆದರೆ ನೋಡೇ ಇಲ್ಲ.ಮನೆಯಲ್ಲಿ ಗಾಂಧೀ ಮುಖ ಮಾಡಲು ಸಾಧ್ಯವಾದದ್ದಾದರೂ ಹೇಗೆ?ಅಸಲಿ ಗಾಂಧಿಯನ್ನು ನೋಡೇ ಇಲ್ಲವಲ್ಲ.............ಆ ವ್ಯಕ್ತಿಗಳ ಯಾವುದಾದರೊಂದು ನೆನಪು ಮಾತ್ರ ಮನಸ್ಸಿನಲ್ಲಿ ಸುಳಿದು ಇಡಿ ವ್ಯಕ್ತಿಯೇ ಆಗುತ್ತಿತ್ತೇ ಹೊರತು ವಿವರ ಪೂರ್ಣವಾದ ಇಡೀ ವ್ಯಕ್ತಿಯನ್ನು ತಾನು ಎಂದೂ ನೋಡೇ ಇಲ್ಲವೇನೋ ಎಂಬಷ್ಟು ಆಶ್ಚರ್ಯಜನಕವಾದ ಸತ್ಯ ಮನಸ್ಸಿನಲ್ಲಿ ಮೂಡಿತು." ಎಂಬ ಮಾತುಗಳು ಸುಬ್ಬರಾಮ ತನ್ನಲ್ಲೂ ಬೇರೆಯವರ ಮುಖದಂತೆ ಮಾಡವ ಹಾರ್ಮೋನು ಹರಿದಾಡುತ್ತಿರುವ ಬಗೆಗೆ ಸಂಭ್ರಮಿಸುವ ಸಂದರ್ಭದಲ್ಲಿ ತನ್ನೊಳಗೆ ಮೂಡುವ ಅನುಮಾನ ಮನುಷ್ಯ ತನ್ನ ಹತ್ತಿರದಲ್ಲಿರುವ ಸಮೀಪಸ್ಥರು, ಆತ್ಮೀಯರನ್ನು ಎಷ್ಟು ಅರ್ಥೈಸಿಕೊಂಡಿದ್ದಾನೆಂಬ ಸತ್ಯಕ್ಕೆ ಬೆಳಕು ಚೆಲ್ಲುತ್ತದೆ.

ಅಣಕು ಕಲಾವಿದನಾಗುವ ಆಸೆಯಿಂದಲೇ ಅದರ ಪ್ರಯತ್ನದಲ್ಲಿ ಸಾಗುವ ಕಥಾನಾಯಕ ಸುಬ್ಬರಾಮ ದಿನದಿಂದ ದಿನಕ್ಕೆ ಶ್ರೇಯಸ್ಸನ್ನು ಗಳಿಸುತ್ತಾ ಎರಡು ದಶಕಗಳಲ್ಲಿ ಕೀರ್ತಿ, ಯಶಸ್ಸು ಹಾಗೂ ಹಣ,ಸುಖ ಎಲ್ಲವನ್ನು ಅನುಭವಿಸುತ್ತಾನೆ. ಆದರೆ ಅದರ ಹಿಂದೆ ಓಡುವ ಕಾಲದ ಭರದಲ್ಲಿ ಸಂಬಂಧಗಳಿಂದ ಸಿಗುವ ಸಣ್ಣ ಸಣ್ಣ ಸಂಗತಿಗಳ ಅನೇಕ ಸಂತೋಷವನ್ನು ಉಪೇಕ್ಷಿಸುವ ಮನಸ್ಥಿತಿಗೆ ಕಾರಣವಾದ ಅದೇ ಹಣ, ಕೀರ್ತಿ ಮುಂದೊಂದು ದಿನ ಹೇಗೆ ನಿಸ್ಸಾರವಾಗಲ್ಪಡುತ್ತದೆಂಬ ನಿಜತತ್ವವನ್ನು ಬಿತ್ತರಿಸುತ್ತದೆ.

ಎಲ್ಲವೂ ದೊರೆತಾಗ ಮನುಷ್ಯನ್ನೇರುವ ಉತ್ತುಂಗದ ಸ್ಥಿತಿಯ ಚಿತ್ರಣವಲ್ಲದೆ, ಹೆಸರಿನ ಸಹಿತ ಎಲ್ಲವನ್ನೂ ಕಳೆದುಕೊಂಡು ನಾಮಾವಶೇಷವಾಗಿ ಶೂನ್ಯತಾಭಾವದಿಂದ ನಿಂತಾಗ ಮನುಷ್ಯನ ಮನಸ್ಸು ಅನುಭವಿಸುವ ಖಿನ್ನತೆ ಅದರ ಸ್ವರೂಪ ಹಾಗೂ ತೀವ್ರತೆಗೆ ದೂಡಲ್ಪಡುವ ಯಾತನೆ ಶೋಚನೀಯ. ಹಾಗಾಗಿಯೇ ಮನುಷ್ಯನ ಮನಸ್ಸು ಸಮಸ್ಥಿತಿಯ ಭಾವದಲ್ಲಿ ಕೂಡಿರಬೇಕೆಂಬ ಚಿಕಿತ್ಸಕ ಗುಣದಂತೆ ಈ ಕಥೆಯ ಸಾರ್ಥಕತೆ ಅಭಿವ್ಯಕ್ತಗೊಂಡಿದೆ. ಪ್ರತಿರೂಪದಂತೆ ಕಾಣಿಸುವ ಬದಲಾಯಿಸುವ ಮುಖ ಚಹರೆ ಕೇವಲ ಮುಖವಲ್ಲ; ಅದು ವ್ಯಕ್ತಿತ್ವವೂ ಕೂಡ. ಕೀರ್ತಿಯ ಬೆನ್ನಿಗಂಟಿಕೊಳ್ಳುವ ಮನುಷ್ಯನ ವ್ಯಕ್ತಿತ್ವ ಕಾಲಕಳೆದಂತೆ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಳ್ಳುವ ಬಹುದೊಡ್ಡ ಅಪಾಯವನ್ನು ಸೂಚಿಸುತ್ತದೆ."ಈಗ ಹಾರ್ಮೋನ್ಗ್ರಂಥಿಯೂ ಹಿಡಿತದಲ್ಲಿಲ್ಲದಾಗ ಗಳಿಗೆಗೊಮ್ಮೆ ಆಕಾರ ಬದಲಿಸುವ ಮುಖ ಹೊತ್ತು ಬದುಕಿರುವುದಾದರೂ ಹೇಗೆ, ವ್ಯವಹಾರ ಮಾಡುವುದಾದರೂ ಹೇಗೆ ಎಂಬ ಪ್ರಮುಖ ಸಮಸ್ಯೆ ತಲೆ ಎತ್ತಿತ್ತು." ಈ ಅಪಾಯ ಮನುಷ್ಯನನ್ನು ದುರಂತದೆಡೆಗೆ ತಳಲ್ಪಡುತ್ತದೆ. ಇಂಥ ಅಪಾಯದಿಂದ ದೂರವಿರಬೇಕೆಂಬ ಸದಾಶಯದೊಂದಿಗೆ ಕಲಾವಿದನ ಬದುಕು ಕೀರ್ತಿಗೆ ದುಂಬಾಲಾಗದೆ ಕಲೆಯ ಸಾರ್ಥಕತೆ ಸಂತೋಷ ಮತ್ತು ಸಮಾಜಮುಖಿಯಾಗಿ ನಿಲ್ಲಬೇಕೆಂಬ ಆಶಯ ಅತ್ಯಂತ ಸಮರ್ಥನೀಯವಾಗಿ ?ಮುಖಾಬಿಲೆ' ಕಥೆಯು ನಿರೂಪಿಸಿದೆ.

ಅಣಕು ಕಲಾವಿದನಾಗಿ ಸುಬ್ಬರಾಮ ದೇಶವಿದೇಶಗಳನ್ನು ಸುತ್ತಿ ಅನೇಕ ಮಹನೀಯರನ್ನು ಕರಾರುವಕ್ಕಾಗಿ ವೇದಿಕೆಯಲ್ಲಿ ತಂದು

ಮೆಚ್ಚುಗೆಗೆ ಪಾತ್ರರಾಗಿ ಮಿಲೇನಿಯಂ ಸುಬ್ಬರಾಮರಾಗಿ? ಮಿಲಿಯನ್ಮುಖಿ ಸುಬ್ಬರಾಮ'ನೆಂಬ ಖ್ಯಾತಿಯನ್ನು ಪಡೆದವನಿಗೆ ಏಕಾಏಕಿ ಬರಸಿಡಿಲಿನಂತೆ ಆಕಸ್ಮಿಕವಾಗಿ ಸಂಭವಿಸುವ ಅವಘಡ ಬದುಕಿನ ದಿಕ್ಕನ್ನೇ ಬದಲಾಯಿಸುವುದು ಪ್ರಾಕೃತಿಕ ಸಹಜತೆಯ ಬಿಂಬವಾಗಿದೆ.ನಿಮಿಷ ನಿಮಿಷಕ್ಕೂ ನಿಯಂತ್ರಣಕ್ಕೆ ಬಾರದೇ ಬದಲಾಗುತ್ತಿರುವ ಮುಖ ಮನುಷ್ಯ ಮನಸ್ಸಿನ ಮೇಲೆ ಒಮ್ಮೆ ನಿಯಂತ್ರಣ ತಪ್ಪಿತೆಂದರೆ ಹತೋಟಿಗೆ ತರುವ ಪ್ರಯತ್ನವೆಷ್ಟು ಕಷ್ಟವೆಂಬ ವಾಸ್ತವವಿಲ್ಲಿ ಅಭಿವ್ಯಕ್ತವಾಗಿದೆ."ಮನಸ್ಸಿನ ಮೇಲೆ ನಿರಂತರವಾಗಿ ದಾಳಿ ಮಾಡುವ ಮುಖಗಳನ್ನು ಮುರಿಯಬೇಕು. ನಿಗ್ರಹಿಸಬೇಕು.ಆಗಲೇ ಸ್ವಂತದ್ದೆಂದು ಹೇಳಿಕೊಳ್ಳಬಹುದಾದ, ಕನಿಷ್ಠ ಮಟ್ಟದಲ್ಲಾದರೂ, ಸ್ಥಿರ ಸ್ವರೂಪ ಲಕ್ಷಣಗಳನ್ನು ಉಳಿಸಿಕೊಳ್ಳಬಹುದು."

ತಾನೇ ಓದಿದ ಶಾಲೆಗೆ ಹಲವು ವರ್ಷಗಳ ನಂತರ ವಿದೇಶದಲ್ಲಿ ಘಟಿಸಿದ ಅವಘಡದಲ್ಲಿ ಎಲ್ಲವನ್ನು ಕಳೆದುಕೊಂಡು ತನ್ನದೇ ಶಾಲೆಗೆ ಧೈರ್ಯ ವಿಶ್ವಾಸದಿಂದ ಅಣಕು ಕಲಾವಿದನ ಪ್ರದರ್ಶನವನ್ನು ನೀಡಲು ಬರುವ ಸುಬ್ಬರಾಮ ತನ್ನ ಸಹಪಾಠಿಯಾಗಿದವನೇ ಆ ಸ್ಕೂಲಿನ ಹೆಡ್ಮಾಸ್ಟರ್ ಆಗಿದ್ದವನನ್ನು ಕಂಡು ಅಣಕು ಕಲಾವಿದನೆಂದು ಪರಿಚಯಿಸಿಕೊಡುವಾಗಲೇ ತನ್ನ ಮೂಲ ಹೆಸರನ್ನು ಬದಲಾಯಿಸಿ ವಿಲ್ಯಂ ಆಂಜೆನ್.... " ಎಂದು ಹೇಳುವ ಸುಬ್ಬರಾಮನ ನಡವಳಿಕೆ ಕಥೆಯ ಅಂತಿಮದಲ್ಲಿ ವ್ಯಕ್ತವಾಗುವ ರೀತಿ ಓದುಗನಲ್ಲಿ ಒಮ್ಮೆ ಸಣ್ಣ ನಡುಕವನ್ನು ಸೃಷ್ಟಿಸುತ್ತದೆ ಎಂದರೆ ತಪ್ಪಾಗಲಾರದು."ಅದುವರೆಗೂ ಪ್ರಯಾಸದಿಂದ ಸ್ವಾಧೀನದಲ್ಲಿಟ್ಟುಕೊಂಡಿದ್ದ ಹಾರ್ಮೋನ್ಸ್ರಳಯ ಕಾಲದ ಪ್ರವಾಹದಂತೆ ಅಬ್ಬರಿಸಿ ಅವನ ಮುಖದಲ್ಲಿ ಉಕ್ಕಿ ಹರಿಯಲಾರಂಭಿಸಿತು, ತನ್ನ ಅಣಕ ಕಲಾವೃತ್ತಿಯಲ್ಲಿ ಅನುಕರಣೆ ಮಾಡಿ ತೋರಿಸಿದ್ದ ಸಮಸ್ತರೂ ಏಕಾಏಕಿಯಾಗಿ ಮುಖರಂಗಕ್ಕೆ ಆರ್ಭಟದಿಂದ ಧುಮಿಕಿ ಕೆಟ್ಟ ಆವೇಶದಿಂದ ಭೂತ ನೃತ್ಯ ಮಾಡತೊಡಗಿದರು.ಅವನು ಅಸಹನೀಯ ಸಂಕಟದಿಂದ ವಿಕಾರವಾಗಿ ಚೀರುತ್ತಾ ಕುಸಿದು ಬಿದ್ದ.ಅವನ ಮುಖದ ಮೇಲ್ಮೈ ಲಕ್ಷಣಗಳು ಪಾತ್ರಗಳ ತುಳಿತದ ಆಘಾತಕ್ಕೆ ಸಿಕ್ಕಿ ಆಕಾರಗಳನ್ನು ನೀಗಿಕೊಂಡು ಅಂಗಾಂಗಗಳ ಸೀಮಾರೇಖೆಗಳು ಅಳಿಸಿ ಹೋಗಿ, ಮುಖ ಕುತ್ತಿಗೆಯ ಮೇಲೆ ಡಬ್ಬು ಹಾಕಿದ ವಿಕೃತ ಮಡಕೆಯಾಯಿತು."ಎಂಬ ಕೊನೆಯ ಸಾಲುಗಳು ಮಾನವನ ಜ್ಞಾನಕ್ಕೆ ನಿಲುಕದ ಪ್ರಕೃತಿಯ ನಿಗೂಢತೆಯನ್ನು ಭೇಧಿಸಲು ಹೊರಟು ಅವಸಾನ ಕಂಡ ದುರಂತ ಚಿತ್ರಣವನ್ನು, ಇತರ ವ್ಯಕ್ತಿತ್ವಗಳು ತಮ್ಮನ್ನು ಆವರಿಸಿಕೊಂಡಾಗ ತನ್ನ ಅಸ್ತಿತ್ವವನ್ನೆ ಕಳೆದುಕೊಂಡು ವಿಕೃತವಾಗುವ ಪಾತ್ರಗಳ ವೈರುಧ್ಯವನ್ನು ಕಾಣಬಹುದಾಗಿದೆ. ಆಧುನಿಕ ನಾಗರಿಕತೆಯಿಂದ ಮನುಷ್ಯನಲ್ಲಿ ಉಂಟಾಗುವ ಕೃತಕ ಸ್ವಭಾವ, ಪ್ರಕೃತಿಯಿಂದ ಮಾನವವನನ್ನು ದೂರ ಸೆಳೆದೊಯ್ಯುವ ಪ್ರಕೃತಿ ಮಾನವ ಸಂಬಂಧವನ್ನು ಇಲ್ಲಿ ವಸ್ತು ಸಂರಚನಾಕ್ರಮ ಹಾಗೂ ತಂತ್ರಗಾರಿಕೆ, ನಿರೂಪಣಾ ಶೈಲಿಯಿಂದ ಕಥೆ ಶ್ರೇಷ್ಠತೆಯನ್ನು ಪಡೆದಿದೆ.

ಒಟ್ಟಾರೆಯಾಗಿ ಎಂ.ಎಸ್.ಕೆ ಪ್ರಭುರವರ ?ಮುಖಾಬಿಲೆ' ಕಥೆಯ ಮೂಲಕ ಸಾಹಿತ್ಯ ರಚನೆಯ ವಿಭಿನ್ನ ಆಯಾಮಗಳನ್ನು ಪರಿಚಯಿಸುತ್ತಾ, ಕೆಲವರ ಸಾಹಿತ್ಯ ನೆನಪಿನಂಗಳದಲ್ಲಿ ಸಾಹಿತ್ಯದ ಮುಖಾಂತರ ಸಾಕ್ಷೀಭೂತರಾಗಿ ನೆಲೆಕಂಡಿರುವ ಎಂ.ಎಸ್.ಕೆ.ಪ್ರಭುರವರ ಸಾಹಿತ್ಯದ ವೈಶಿಷ್ಟ್ಯತೆಯ ಚಿತ್ರಣವನ್ನು ನೀಡುವುದು ಈ ಸಂಶೋಧನೆಯ ಸಂಪ್ರಬಂಧದ ಆಶಯವಾಗಿದೆ.

## ಉಲ್ಲೇಖಗಳು

1. ಸಮಗ್ರ ಕತೆಗಳು– ಎಂ.ಎಸ್.ಕೆ ಪ್ರಭು
2. ಅಸಂಗತ–ಬಸವರಾಜ ನಾಯ್ಕರ
3. ಫ್ಯಾಂಟಸಿ ಪ್ರಭು–ವಿವಿಧ ಲೇಖಕರು
4. ಕೆಲವು ವಿದೇಶಿ ಕತೆಗಳು–ಎನ್.ಎಸ್ತ್ರೀಧರಮೂರ್ತಿ
5. ವ್ಯಷ್ಟಿ ಮತ್ತು ಸಮಷ್ಟಿ– ಕರೀಗೌಡ ಬೀಚನಹಳ್ಳಿ
6. ಸಾಹಿತ್ಯ ವಿಮರ್ಶೆ–ಸಿ.ಎನ್.ರಾಮಚಂದ್ರನ್